ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 16-11-1995.

# *ಬಾಪ್‌ದಾದಾರವರ ಬಯಕೆ- ಡೈಮಂಡ್ ಜುಬ್ಲೀ ವರ್ಷವನ್ನು ಸೆಳೆತ ಮುಕ್ತರಾಗುವ ವರ್ಷವಾಗಿ ಆಚರಿಸಿರಿ.*

(बापदादा की चाहना - डायमण्ड जुबली वर्ष को लगाव मुक्त वर्ष के रूप में मनाओ)

ಇಂದು ಬಾಪ್‌ದಾದಾರು ಸದಾ ಮನಸ್ಸಿನ ಅಂತರಾಳದಿಂದ ತಂದೆಯ ನೆನಪಿನಲ್ಲಿ ನಿರತರಾಗಿರುವ ತಮ್ಮ ಸ್ನೇಹೀ ಸಹಯೋಗೀ ಮಕ್ಕಳೊಂದಿಗೆ ಮಿಲನ ಮಾಡಲು ಬಂದಿದ್ದಾರೆ. ಮಕ್ಕಳ ಸ್ನೇಹವು ಎಷ್ಟಿದೆಯೋ ಅಷ್ಟೇ ತಂದೆಗೂ ಮಕ್ಕಳೊಂದಿಗೆ ಸ್ನೇಹವಿದೆ ತಂದೆಯು ಎಲ್ಲಾ ಮಕ್ಕಳಿಗೂ ಒಂದೇ ಸಮಾನ ಅತಿಸ್ನೇಹವನ್ನು ಕೊಡುತ್ತಾರೆ. ಆದರೆ ಮಕ್ಕಳು ತಮ್ಮ ತಮ್ಮ ಶಕ್ತಿಯನುಸಾರವಾಗಿ ಸ್ನೇಹವನ್ನು ಧಾರಣೆ  ಮಾಡುತ್ತಾರೆ. ಆದ್ದರಿಂದ ತಂದೆಯೂ ಸಹ ನಂಬರ್‌ವಾರ್ ನೆನಪು-ಪ್ರೀತಿ ಎಂದು ಹೇಳಬೇಕಾಗುತ್ತದೆ ಆದರೂ ತಂದೆಯು ಎಲ್ಲಾ ಮಕ್ಕಳಿಗೂ ನಂಬರ್‌ವನ್ ಹೃದಯದ ಪ್ರೀತಿಯನ್ನು ಅಮೃತವೇಳೆಯಿಂದಲೂ ಕೊಡುತ್ತಾರೆ. ಆದ್ದರಿಂದ ಅಮೃತ ವೇಳೆಯು ವಿಶೇಷವಾಗಿ ಮಕ್ಕಳ ಸಲುವಾಗಿಯೇ ಮೀಸಲಾಗಿ ಇಡಲ್ಪಟ್ಟಿದೆ. ಏಕೆಂದರೆ ಅಮೃತವೇಳೆಯು ಇಡೀ ದಿನದ ಆದಿ ಸಮಯವಾಗಿದೆ ಆದ್ದರಿಂದ ಯಾವ ಮಕ್ಕಳು ಆದಿ ಸಮಯದಲ್ಲಿ ತಂದೆಯ ಸ್ನೇಹವನ್ನು ಹೃದಯದಲ್ಲಿ ಧಾರಣೆ ಮಾಡಿಕೊಳ್ಳುತ್ತಾರೆಯೋ ಅಂತಹ ಮಕ್ಕಳ ಹೃದಯದಲ್ಲಿ ಪರಮಾತ್ಮನ ಸ್ನೇಹವು ತುಂಬಿಕೊಂಡಿರುವ ಕಾರಣ ಅನ್ಯ ಯಾವ ಸ್ನೇಹವೂ ಆಕರ್ಷಿತರನ್ನಾಗಿ ಮಾಡುವುದಿಲ್ಲ. ಒಂದು ವೇಳೆ ನಿಮ್ಮ ಸ್ಥಿತಿಯ ಅನುಸಾರವಾಗಿ ಪೂರ್ತಿ ಹೃದಯ ತುಂಬುವಂತೆ ಹೃದಯದಲ್ಲಿ ಸ್ನೇಹವನ್ನು ಧಾರಣೆ ಮಾಡದಿದ್ದರೆ, ಸ್ವಲ್ಪವಾದರೂ ಖಾಲಿಯಿದ್ದರೆ, ಅರ್ಧಂಬರ್ಧ ತೆಗೆದುಕೊಂಡಿದ್ದರೆ ಹೃದಯದಲ್ಲಿ ಸ್ಥಳವಿರುವ ಕಾರಣ ಮಾಯೆಯು ಭಿನ್ನ ಭಿನ್ನ ರೂಪಗಳಿಂದ ಅನೇಕ ಸ್ನೇಹಗಳು ಎಂದರೆ ವ್ಯಕ್ತಿ ಅಥವಾ ವೈಭವ ಎರಡೂ ರೂಪದಲ್ಲಿ ಆ ಸ್ನೇಹಗಳಲ್ಲಿ ಆಕರ್ಷಿತರನ್ನಾಗಿ ಮಾಡಿಬಿಡುತ್ತದೆ.

ಅನೇಕ ಮಕ್ಕಳು ಬಾಪ್‌ದಾದಾರವರೊಂದಿಗೆ ಏನು ಹೇಳುತ್ತಾರೆಂದರೆ, ನನ್ನ ಬಳಿ ಇನ್ನೂ ಮಾಯೆಯು ಏಕೆ ಬರುತ್ತದೆಯೆಂದು ಯಾವಾಗ ಮಾಸ್ಟರ್ ಸರ್ವಶಕ್ತಿವಂತರಾಗಿಬಿಟ್ಟಿದ್ದೀರೋ ಆಗ ಮಾಯೆಯು ಬರುವ ಪ್ರಶ್ನೆಯೇ ಇಲ್ಲ. ಆದರೆ ಕಾರಣವೇನೆಂದರೆ ದಿನದ ಅದಿಕಾಲದ ಅಮೃತವೇಳೆಯಲ್ಲಿ ನಿಮ್ಮ ಮನಸ್ಸಿನಲ್ಲಿ ಪರಮಾತ್ಮನ ಸ್ನೇಹವನ್ನು ಸಂಪೂರ್ಣ ರೂಪದಿಂದ ಧಾರಣೆ ಮಾಡುವುದಿಲ್ಲ. ಒಂದು ವೇಳೆ ಯಾವುದಾದರೂ ವಸ್ತುವು ಅರ್ಧಂಬರ್ಧ ತುಂಬಿದ್ದರೆ, ಸ್ವಲ್ಪವಾದರೂ ಖಾಲಿಯಿದ್ದರೆ, ತುಳುಕಾಟವಂತೂ ಇರುತ್ತದೆಯಲ್ಲವೇ. ಕುಳಿತುಕೊಳ್ಳುತ್ತಾ, ಏಳುತ್ತಾ. ಲಕ್ಷ್ಯವೂ ಏನು ಇದೆಯೆಂದರೆ ಒಬ್ಬ ತಂದೆಯ ಹೊರತು ಅನ್ಯರು ಯಾರೂ ಇಲ್ಲ ಎಂದು ಹೀಗೆ ಹೇಳಿಯೂ ಹೇಳುತ್ತೀರಿ. ಇದನ್ನು ಮನಸ್ಪೂರ್ತಿಯಾಗಿ ಹೇಳುತ್ತೀರೋ ಅಥವಾ ಕೇವಲ ಬಾಯಿಯಿಂದ ಹೇಳುತ್ತೀರೋ? ಮನಸ್ಪೂರ್ತಿಯಾಗಿ

ಹೇಳುವುದಾದರೆ ಮನಸ್ಸಿನಲ್ಲಿ ಅನ್ಯ ಆಕರ್ಷಣೆಯು ಇರುವ ಕಾರಣವು ಏನಾಗಿದೆ? ಅವಶ್ಯವಾಗಿ ಯಾವುದೋ ಅನ್ಯ ವ್ಯಕ್ತಿ ಅಥವಾ ವೈಭವದ ಕಡೆಗೆ ಸ್ನೇಹವುಂಟಾಗುತ್ತದೆ ಆಗ ಅದು ಆಕರ್ಷಿತರನ್ನಾಗಿ ಮಾಡುತ್ತದೆ. ಹೃದಯದಲ್ಲಿ ಸಂಪೂರ್ಣ ಪರಮಾತ್ಮನ ಪ್ರೀತಿಯು ಪೂರ್ತಿ ತುಂಬಿಕೊಂಡಿರುವುದಿಲ್ಲ ನೀವು ವಿಚಾರ ಮಾಡಿರಿ ಒಂದು ವೇಳೆ ಯಾರಾದರೂ ನಿಮ್ಮ ಒಂದು ಕೈಯಲ್ಲಿ ವಜ್ರವನ್ನು ಹಾಗೂ ಇನ್ನೊಂದು ಕೈಯಲ್ಲಿ ಮಣ್ಣಿನ ಮುದ್ದೆಯನ್ನು ಕೊಟ್ಟರೆ ನಿಮಗೆ ಯಾವುದರ ಕಡೆಗೆ ಆಕರ್ಷಣೆಯಾಗುವುದು. ವಜ್ರದ ಕಡೆಗೆ, ಮಣ್ಣಿನ ಮುದ್ದೆಯ ಕಡೆಗೆ ಆಗುವುದಿಲ್ಲವಲ್ಲವೇ. ಮಣ್ಣಿನೊಂದಿಗೆ ಆಟವಾಡುವುದೂ ಸಹ ಚೆನ್ನಾಗಿರುತ್ತದೆಯಲ್ಲವೇ. ವ್ಯರ್ಥ ಸಂಕಲ್ಪಗಳೂ ಸಹ ಏನಾಗಿವೆ? ವಜ್ರ ಆಗಿವೆಯೋ ಅಥವಾ ಮಣ್ಣಾಗಿವೆಯೋ? ಆದ್ದರಿಂದ ಮಣ್ಣಿನೊಂದಿಗೆ ಆಟವಾಡುತ್ತೀರಲ್ಲವೇ. ಏಕೆಂದರೆ ಅಭ್ಯಾಸವಾಗಿ ಬಿಟ್ಟಿರುವುದರಿಂದ ವ್ಯಕ್ತಿಯು ಸಹ ಏನಾಗಿದ್ದಾರೆ? ಮಣ್ಣಾಗಿದ್ದಾನಲ್ಲವೇ? ಮಣ್ಣು ಮಣ್ಣಿನಲ್ಲಿ ಬೆರೆತು ಹೋಗುತ್ತದೆ. ನೋಡುವುದಕ್ಕೆ ನಿಮಗೆ ತುಂಬಾ ಸುಂದರವಾಗಿ ಕಾಣುತ್ತಾರೆ. ರೂಪದಿಂದಲಾಗಲಿ, ಯಾವುದಾದರೂ ವಿಶೇಷತೆಯಿಂದಾಲಿ ಅಥವಾ ಯಾವುದಾದರೂ ಗುಣದಿಂದಲಾಗಲಿ ಸುಂದರವಾಗಿ ಕಂಡಾಗ ಏನು ಹೇಳುತ್ತಾರೆಂದರೆ ನನಗೇನೂ ಸೆಳೆತವಿಲ್ಲ, ಸ್ನೇಹವಿಲ್ಲ ಆದರೆ ಇವರ ಈ ಗುಣವು ತುಂಬಾ ಒಳ್ಳೆಯದಾಗಿದೆ. ಹೀಗೆ ಗುಣದ ಪ್ರಭಾವವು ಸ್ವಲ್ಪ ಆಗಿ ಬಿಡುತ್ತದೆ ಅಥವಾ ಇವರಲ್ಲಿ ಸೇವೆಯ ವಿಶೇಷತೆಯು ತುಂಬಾ ಇದೆ ಎಂದು ಹೇಳುತ್ತಾರೆ. ಆದ್ದರಿಂದ ಸೇವೆಯ ವಿಶೇಷತೆಯ ಕಾರಣ ಸ್ವಲ್ಪ ಸ್ನೇಹವಿದೆ. ಸ್ನೇಹವೆನ್ನುವ ಶಬ್ದವನ್ನು ಹೇಳುವುದಿಲ್ಲ ಆದರೆ ಒಂದು ವೇಳೆ ವಿಶೇಷವಾಗಿ ಯಾರಾದರೂ ವ್ಯಕ್ತಿಯ ಕಡೆ ಅಥವಾ ವೈಭವದ ಕಡೆ ಪದೇ ಪದೇ ಸಂಕಲ್ಪವಾದರೂ ಬಂದರೆ - ಇವರು ಇದ್ದರೆ ತುಂಬಾ ಒಳ್ಳೆಯದು ಎನ್ನುತ್ತಾರೆ ಇದೂ ಸಹ ಆಕರ್ಷಣೆಯಾಗಿದೆ. ವ್ಯಕ್ತಿಯ ಸೇವೆಯ ವಿಶೇಷತೆಯ ದಾತಾ ಯಾರಾಗಿದ್ದಾರೆ? ಆ ವಿಶೇಷತೆಯನ್ನು ಯಾರಾದರೂ ವ್ಯಕ್ತಿಯು ಕೊಡುತ್ತಾರೆಯೇ ಅಥವಾ ತಂದೆಯು ಕೊಡುತ್ತಾರೆಯೇ ಯಾರು ಕೊಡುತ್ತಾರೆ? ಆದ್ದರಿಂದ ವ್ಯಕ್ತಿಯು ತುಂಬಾ ಉತ್ತಮರಾಗಿದ್ದಾರೆ ಎನ್ನುವುದೇನೋ ಸರಿ ಆದರೆ ಯಾವಗಲಾದರೂ ಯಾವುದಾದರೂ ವಿಶೇಷತೆಯನ್ನು ನೋಡಿದರೆ, ಸೇವೆಯನ್ನು ನೋಡಿದರೆ ದಾತಾನನ್ನು ಮರೆಯಬೇಡಿ. ಆ ವ್ಯಕ್ತಿಯೂ ಸಹ ತಂದೆಯಿಂದ ತೆಗೆದುಕೊಳ್ಳುವವರಾಗಿದ್ದಾರೆ. ಅವರೇನೂ ದಾತಾ ಅಲ್ಲ. ತಂದೆಯ ಮಗುವಾಗದಿದ್ದರೆ ಆ ವ್ಯಕ್ತಿಯಲ್ಲಿ ಈ ಸೇವೆಯ ಗುಣ ಅಥವಾ ವಿಶೇಷತೆಯು ಬರುವುದು ಸಾಧ್ಯವಿದೆಯೇ? ಅಥವಾ ಆ ವಿಶೇಷತೆಯನ್ನು ಅಜ್ಞಾನದಿಂದಲೇ ತೆಗೆದುಕೊಂಡು ಬರುತ್ತಾರೆಯೇ? ಈಶ್ವರೀಯ ಸೇವೆಯ ವಿಶೇಷತೆಯು ಅಜ್ಞಾನದಲ್ಲಿ ಇರುವ ಸಂಭವವಿಲ್ಲ. ಒಂದುವೇಳೆ ಅಜ್ಞಾನದಲ್ಲಿಯೂ ಯಾವುದಾದರೂ ಗುಣ ಅಥವಾ ವಿಶೇಷತೆಯಿದ್ದರೂ ಜ್ಞಾನದಲ್ಲಿ ಬಂದಮೇಲೆ ಆ ಗುಣ ಅಥವಾ ವಿಶೇಷತೆಯಲ್ಲಿ ಜ್ಞಾನವನ್ನು ತುಂಬದಿದ್ದರೆ ಆ ವಿಶೇಷತೆ ಅಥವಾ ಗುಣವು ಜ್ಞಾನಮಾರ್ಗದ ನಂತರ ಇಷ್ಟು ಸೇವೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಸ್ವಾಭಾವಿಕ ಗುಣದಲ್ಲಿಯೂ ಜ್ಞಾನವನ್ನು ತುಂಬಲೇಬೇಕಾಗುತ್ತದೆ. ಆದರೆ ಜ್ಞಾನವನ್ನು ತುಂಬುವವರು ಯಾರಾಗಿದ್ದಾರೆ! ತಂದೆ ಆದ್ದರಿಂದ ಯಾರ ಕೊಡುಗೆಯಾಯಿತು. ದಾತಾನು ಯಾರಾಗಿದ್ದಾರೆ? ನಿಮಗೆ ತೆಗೆದುಕೊಳ್ಳುವವರು ಇಷ್ಟವಾಗುತ್ತಾರೋ ಅಥವಾ ದಾತಾ ಇಷ್ಟವಾಗುತ್ತಾರೋ? ಆದ್ದರಿಂದ ತೆಗೆದುಕೊಳ್ಳುವವರ ಬೆನ್ನು ಹತ್ತಿ ಏಕೆ ಓಡುತ್ತೀರಿ!

ತಂದೆಯ ಮುಂದೆ ಅಥವಾ ದಾದಿಯರ ಮುಂದೆ ಹಲವರು ತುಂಬಾ ಸವಿ ಸವಿಯಾಗಿ ಮಾತನಾಡುತ್ತಾರೆ. ದಾದಿ, ನನಗೆ ಏನೂ ಸೆಳೆತವಿಲ್ಲ ಸ್ವಲ್ಪವೂ ಇಲ್ಲ. ಕೇವಲ ಸೇವೆಯ ಕಾರಣ ಅತಿ ಸ್ವಲ್ಪ ಇದೆ. ಹೀಗೆ ಅತಿ ಸ್ವಲ್ಪವಿದೆಯೆಂದು ಹೇಳಿ ತಮ್ಮನ್ನು ದೋಷರಹಿತವೆಂದು ಸಿದ್ಧ ಮಾಡುತ್ತಾರೆ. ಆದರೆ ಆ ಸೆಳೆತ(ಆಕರ್ಷಣೆ) ಗುಣದ್ದಾಗಿರಲಿ, ಸೇವೆಯದಾಗಿರಲಿ ಆದರೆ ಸೆಳೆತವು ಇಂದಿಲ್ಲದಿದ್ದರೂ ನಾಳೆ ಎಲ್ಲಿಗೆ ಕರೆದೊಯ್ಯುತ್ತದೆ? ಒಬ್ಬೊಬ್ಬರನ್ನಂತೂ ಸೆಳೆತವು ಹಳೆಯ ಪ್ರಪಂಚದವರೆಗೂ ಕರೆದುಕೊಂಡು ಹೋಗುತ್ತದೆ. ಆದರೆ ಮೆಜಾರಿಟಿ (ಅಧಿಕ ಸಂಖ್ಯೆಯ) ಮಕ್ಕಳು ಹಳೆಯ ಪ್ರಪಂಚದವರೆಗೆ ಹೋಗುವುದಿಲ್ಲ, ಕೆಲವರು ಹೋಗುತ್ತಾರೆ. ಮೆಜಾರಿಟಿ ಮಕ್ಕಳನ್ನು ಸೆಳೆತವು ಪುರುಷಾರ್ಥದಲ್ಲಿ ಸೋಮಾರಿತನದ ಕಡೆಗೆ ಕರೆದೊಯ್ಯುತ್ತದೆ. ಆಮೇಲೆ ಏನು ವಿಚಾರ ಮಾಡುತ್ತಾರೆಂದರೆ - ಇದಂತೂ ಅಲ್ಪ ಸ್ವಲ್ಪ ಇದ್ದೇ ಇರುತ್ತದೆ ಎಂದು. ಆಮೇಲೆ ತಂದೆಗೂ ಸಹ ತಿಳಿಸಿಕೊಡಲು ಪ್ರಾರಂಭ ಮಾಡುತ್ತಾರೆ. ಬಾಬಾ ನೀವಂತೂ ಸಾಕಾರದಲ್ಲಿ ಇಲ್ಲ. ಬ್ರಹ್ಮಾಬಾಬಾರವರೂ ಸಹ ಅವ್ಯಕ್ತವಾಗಿಬಿಟ್ಟರು. ಹಾಗು ನೀವಂತೂ ಜ್ಯೋತಿರ್ಬಿಂದುವಾಗಿದ್ದೀರಿ. ನಾವು ಸಾಕಾರದಲ್ಲಿ ಇದ್ದೇವೆ. ಎಷ್ಟು ದೊಡ್ಡ ಸ್ಥೂಲ ಶರೀರವಿದೆ ಹಾಗೂ ಶರೀರದಿಂದ ಎಲ್ಲವನ್ನೂ ಮಾಡಬೇಕಾಗುತ್ತದೆ. ನಡೆದಾಡಬೇಕಾಗುತ್ತದೆ. ಹೀಗೆ ನಾವು ಸಾಕಾರ ದೇಹಧಾರಿ ಆಗಿದ್ದೇವೆ ಹಾಗೂ ನೀವು ಆಕಾರ ಹಾಗೂ ನಿರಾಕಾರ ಆಗಿದ್ದೀರಿ ಈಗ ಸಾಕಾರದಲ್ಲಿ ಯಾರಾದರೂ ಬೇಕಾಗುತ್ತಾರಲ್ಲವೇ. ಹೋಗಲಿ ಅನೇಕರು ಬೇಕಾಗಿಲ್ಲ. ಒಬ್ಬರಾದರೂ ಇರಬೇಕಲ್ಲವೇ. ಒಬ್ಬರೂ ಬೇಡವೇ? ನೋಡಿರಿ ಒಬ್ಬರು ಬೇಕಾಗುತ್ತದೆಯೆಂದು ಬಾಪ್‌ದಾದಾರಂತೂ ಹೇಳುತ್ತಾರೆ. ಬೇಡವೇನು? (ಒಬ್ಬ ಬಾಬಾರವರು ಬೇಕು) ತಂದೆಯಂತೂ ಇದ್ದೇ ಇದ್ದಾರೆ. ಆದರೆ ಅನೇಕ ಸಲ ಮನಸ್ಸಿನಲ್ಲಿ ಅನೇಕ ವಿಚಾರಗಳು ಬಂದು ಬಿಡುತ್ತವೆ ಹಾಗೂ ಮನಸ್ಸು ಭಾರವಾಗಿ ಬಿಡುತ್ತದೆ. ಎಲ್ಲಿಯವರೆಗೆ ಮನಸ್ಸನ್ನು ಹಗುರ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಯೋಗವು ಆಗುವುದಿಲ್ಲ. ಆ ಮೇಲೆ ಏನು ಮಾಡುವುದು? ಅಂತಹ ಸಮಯದಲ್ಲಿ ಏನು ಮಾಡುವುದು ಎನ್ನುವುದು ತಂದೆಯ ಪ್ರಶ್ನೆಯೂ ಆಗಿದೆ. ಮನಸ್ಸು ಭಾರವಾಗಿದ್ದರೆ ಯೋಗವು ಆಗದಿದ್ದರೆ ಅಂತಹ ಸಮಯದಲ್ಲಿ ಏನು ಮಾಡಬೇಕು? ವಾಂತಿ ಮಾಡದಿದ್ದರೆ ಒಳಗಡೆಯೇ ಕಸಿವಿಸಿಯಾಗುತ್ತಿದ್ದರೆ ಅದು ಹಿತವೆನಿಸುತ್ತದೆಯೇ? ಡಾಕ್ಟರುಗಳು ಸಹ ಏನು ಹೇಳುತ್ತಾರೆ? ಒಂದು ವೇಳೆ ಹೊಟ್ಟೆಯು ಭಾರವಾಗಿ ಬಿಟ್ಟರೆ ವಾಂತಿ ಮಾಡಿ ಅದನ್ನು ಹೊರಗೆ ಹಾಕಿ ಬಿಡಬೇಕಲ್ಲವೇ. ಅಥವಾ ಒಳಗೇ ಇಟ್ಟುಕೊಳ್ಳಬೇಕೋ? ಡಾಕ್ಟರ್ ಏನು ಹೇಳುತ್ತಾರೇ? ವಾಂತಿ ಮಾಡಬೇಕಲ್ಲವೇ? ವಾಂತಿ ಮಾಡಬೇಕೆಂದು ಡಾಕ್ಟರೂ ಹೇಳುತ್ತಾರೆ, ಒಳ್ಳೆಯದು.

ಇದಂತೂ ತನುವಿನ ವೈದ್ಯನ ವಿಚಾರವಾಯಿತು ಆದರೆ ನೀವೆಲ್ಲರೂ ಮನಸ್ಸಿನ ಡಾಕ್ಟರ್ ಆಗಿದ್ದೀರಿ. ಶರೀರದ ಡಾಕ್ಟರ್ ತಮ್ಮ ಉತ್ತರವನ್ನೂ ಕೊಟ್ಟರು. ಈಗ ಮನಸ್ಸಿನ ವೈದ್ಯರು ಹೇಳಿರಿ - ಒಂದು ವೇಳೆ ಮನಸ್ಸಿನಲ್ಲಿ ಏನಾದರೂ ಗೊಂದಲವಿದ್ದರೆ ಎಲ್ಲಿ ವಾಂತಿ ಮಾಡುವುದು ಅಥವಾ ತೋಡಿಕೊಳ್ಳುವುದು? ತಂದೆಯ ಮುಂದೆ ವಾಂತಿ ಮಾಡುವಿರಾ (ತಂದೆಯ ಕೋಣೆಯಲ್ಲಿ ಹೋಗಿ ಹೇಳಬೇಕು) ಬಾಬಾರವರ ರೂಂನಲ್ಲಿ ವಾಂತಿ ಮಾಡಿ ಬರುವುದೇ, ವಿಚಾರ ಮಾಡಿರಿ ತಂದೆಯ ಮುಂದೆ ವಾಂತಿ ಮಾಡುವಿರಾ? ಇಲ್ಲದಿದ್ದರೆ ಏನು ಮಾಡುವುದು? ಯಾವುದಾದರೂ ಸ್ಥಾನವನ್ನು ಹೇಳಿರಿ. ಬಾಪ್‌ದಾದಾ ಅಂತೂ ಮಕ್ಕಳ ಪಕ್ಷವನ್ನು ವಹಿಸುತ್ತಾರೆ. ಆ ಸಮಯದಲ್ಲಂತೂ ಯಾರಾದರೂ ಅವಶ್ಯವಾಗಿ ಇರಬೇಕು.

(ಬಾಬಾರವರಿಗೆ ಹೇಳಬೇಕು) ಒಂದು ವೇಳೆ ಬಾಬಾ ಕೇಳದೆಯೇ ಇದ್ದರೆ ಏನು ಮಾಡುವುದು? ಅನೇಕ ಮಕ್ಕಳ ಕಂಪ್ಲೇಂಟ್ (ದೂರು) ಏನಿದೆಯೆಂದರೆ, ನಾನಂತೂ ಬಾಬಾಗೆ ತಿಳಿಸಿದೆನು ಆದರೆ ತಂದೆಯು ಕೇಳಿಸಿಕೊಳ್ಳಲೇ ಇಲ್ಲ. ಉತ್ತರವನ್ನೇ ಕೊಡಲಿಲ್ಲ, ಆಮೇಲೆ ಏನು ಮಾಡುವುದು ಎಂದು ಹೇಳುತ್ತಾರೆ. ವಾಸ್ತವವಾಗಿ ಒಂದು ವೇಳೆ ಮನಸ್ಸಿನಲ್ಲಿ ಪರಮಾತ್ಮನ ಪ್ರೀತಿ, ಪರಮಾತ್ಮನ ಶಕ್ತಿಗಳು, ಪರಮಾತ್ಮನ ಜ್ಞಾನವು ಪೂರ್ತಿ ತುಂಬಿಕೊಂಡಿದ್ದರೆ ಸ್ವಲ್ಪವೂ ಖಾಲಿ ಇಲ್ಲದಿದ್ದರೆ, ಎಂದೂ ಯಾವ ಕಡೆಯೂ ಸೆಳೆತ, ಸ್ನೇಹವು ಉಂಟಾಗಲು ಸಾಧ್ಯವಿಲ್ಲ.

ಅನೇಕರು ತಮಗೆ ಸೆಳೆತವಿಲ್ಲ. ಆದರೆ ಇವರು ಉತ್ತಮರೆನಿಸುತ್ತಾರೆ ಎಂದು ಹೇಳುತ್ತಾರೆ. ಅವರನ್ನು ಯಾವ ಪಂಕ್ತಿಯಲ್ಲಿ ಸೇರಿಸಬಹುದು? ಸೆಳೆತವಿಲ್ಲ ಆದರೆ ಉತ್ತಮರಾಗಿದ್ದಾರೆ ಎನ್ನಿಸುತ್ತದೆ ಎಂದು ಹೇಳುವುದೂ ಸಹ ಏನಾಗಿದೆ? ಇವರು ಒಳ್ಳೆಯವರಾಗಿದ್ದಾರೆ ಎಂದೆನಿಸಿದರೂ ಅಡ್ಡಿಯಿಲ್ಲ. ಅವರೊಂದಿಗೆ ಕುಳಿತುಕೊಳ್ಳಲು, ಅವರೊಂದಿಗೆ ಮಾತನಾಡಲು, ಅವರಿಂದ ಸೇವೆ ಮಾಡಿಸಿಕೊಳ್ಳಲು, ಹಿತವೆನಿಸುತ್ತದೆ ಎಂದು ಹೇಳಿದರೆ ಅದಕ್ಕೆ ಅನುಮತಿ ಕೊಡಬಹುದೇ? ಅಲ್ಪಸ್ವಲ್ಪ ಅನುಮತಿ ಕೊಡಬೇಕು ಎಂದು ತಿಳಿದುಕೊಂಡಿರುವವರು ಇನ್ನೂ ಸಂಪೂರ್ಣರಂತೂ ಆಗಿಲ್ಲ ಪುರುಷಾರ್ಥ ಮಾಡುತ್ತಿದ್ದಾರೆ. ಆದ್ದರಿಂದ ಸ್ವಲ್ಪ ಅನುಮತಿ, ರಿಯಾಯತಿ ಕೊಡಬೇಕು ಎಂದು ಭಾವಿಸುವವರು ಕೈ ಎತ್ತಿರಿ. ಈಗ ಕೈ ಅಂತೂ ಎತ್ತುವುದಿಲ್ಲ ಏಕೆಂದರೆ ನಾಚಿಕೆಯಾಗುತ್ತದೆಯಲ್ಲವೇ? ಆದರೆ ಒಂದುವೇಳೆ ಸ್ವಲ್ಪವೇ ರಿಯಾಯಿತಿ ಇರಬೇಕು ಎಂದು ನೀವು ತಿಳಿದುಕೊಂಡಿದ್ದರೆ ದಾದಿಗೆ ವೈಯಕ್ತಿಕವಾಗಿ (ಪ್ರೈವೇಟಾಗಿ)ಚೀಟಿ ಬರೆದುಕೊಟ್ಟುಬಿಡಿ. ದಾದಿಯವರೇ ನಿಮ್ಮೊಂದಿಗೆ 5 ನಿಮಿಷ ಮಾತನಾಡಬೇಕು ಎಂದು ಹೇಳಬೇಡಿರಿ. ಅದಕ್ಕೆ ತುಂಬಾ ಸಮಯದ ಅಗತ್ಯವಿದೆ. ಆದರೆ ಚೀಟಿಯಲ್ಲಿ ಬರೆದುಕೊಟ್ಟರೆ ಬಾಪ್‌ದಾದಾ ಅಂತಹವರ ಒಳ್ಳೆಯ ಸಂಘಟನೆಯನ್ನು ಮಾಡುವೆವು ಇನ್ನೂ ಒಳ್ಳೆಯದಾಗಿ ಬಿಡುತ್ತದೆಯಲ್ಲವೇ ಒಳ್ಳೆಯದು. ಈಗ ಎಲ್ಲರೂ ಹಾಗೆ ಮಾಡುವುದಿಲ್ಲವೆಂದು ಹೇಳುತ್ತಾ ಇದ್ದಾರೆ. ಹಾಗೂ ಎಲ್ಲರ ಫೋಟೋ ವಿಡಿಯೋದಲ್ಲಿ ಮೂಡುತ್ತಾ ಇದೆ. ಒಂದು ವೇಳೆ ಬೇಡವೆಂದು ಹೇಳಿ ಅಮೇಲೆ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಆ ಕ್ಯಾಸೆಟ್ಟನ್ನು ಕಳುಹಿಸಿ ನೀವು ಹಾಗೆ ಮಾಡುವುದಿಲ್ಲವೆಂದು ಹೇಳಿ ಆಮೇಲೆ ಏಕೆ ಮಾಡಿದಿರಿ ಎಂದು ಕೇಳುವೆವು. ಕ್ಯಾಸೆಟ್ಟನ್ನು ಕಳುಹಿಸಬೇಕಾಗುತ್ತದೆಯೋ ಅಥವಾ ಸುರಕ್ಷಿತವಾಗಿ ಇರುವಿರೋ? ಪಕ್ಕಾ, ಆಗಿದ್ದೀರೋ ಅಥವಾ ಸ್ವಲ್ಪ ಸ್ವಲ್ಪ ಕಚ್ಚಾ ಆಗಿದ್ದೀರೋ? ಪಕ್ಕಾ ಆಗಿದ್ದೀರಾ.

ಈ ಸೀಸನ್ನಿನಲ್ಲಿ ಡೈಮಂಡ್ ಜೂಬ್ಲಿಯ ಪ್ರಾರಂಭ ಮಾಡಬೇಕಾಗಿರುವುದರಿಂದ ನೀವು ಈ ಸೀಜನ್ನಿನಲ್ಲಿ ಡೈಮಂಡ್ ಜೂಬ್ಲಿಯ ಸಮ್ಮೇಳನದ ಭಾಷಣಗಳ, ಮೇಳಗಳ ಅನೇಕ ಪ್ರೋಗ್ರಾಂಗಳನ್ನು ತಯಾರು ಮಾಡಿದ್ದೀರಿ. ಆದರೆ ಬಾಪ್‌ದಾದಾರು ವಿಶೇಷವಾಗಿ ಈ ಡೈಮಂಡ್ ಜೂಬ್ಲಿಯಲ್ಲಿ ಒಂದು ಪ್ರೋಗ್ರಾಂ ತಯಾರು ಮಾಡಬೇಕೆಂದು ಬಯಸುತ್ತಾರೆ. ಅದಕ್ಕಾಗಿ ತಯಾರಾಗಿದ್ದೀರಾ?

ಬಾಪ್‌ದಾದ ಏನು ಬಯಸುತ್ತಾರೆಂದರೆ, ಡೈಮಂಡ್ ಜೂಬ್ಲಿಯಲ್ಲಿ ಮಕ್ಕಳಲ್ಲಿ ಯಾರನ್ನು ನೋಡಿದರೂ ಅವರು ಎರಡು ವರ್ಷದವರಾಗಿರಲಿ, ಅಥವಾ 60 ವರ್ಷದವರಾಗಿರಲಿ, ಅಥವಾ ಎರಡು ತಿಂಗಳಿನವರಾಗಿರಲಿ. ಶಿಕ್ಷಕಿಯರಾಗಿರಲಿ ಅಥವಾ ವಿದ್ಯಾರ್ಥಿಯಾಗಿರಲಿ, ಸಮರ್ಪಣೆಯಾಗಿರಲಿ, ಅಥವಾ ಪ್ರವೃತ್ತಿಯಲ್ಲಿರಲಿ ಆದರೆ ಡೈಮಂಡ್

ಬೂಬ್ಲಿಯ ವರ್ಷದಲ್ಲಿ ತಂದೆಯ ಜೊತೆಯಲ್ಲಿ ನೀವೆಲ್ಲರೂ  ಪವಿತ್ರತೆಯ ಮೂಲಕ ನಾವು ಪ್ರಕೃತಿಯನ್ನೂ ಪಾವನ ಮಾಡುವೆವೆಂದು ಯಾವ ಪಣವನ್ನಾದರೆ ತೊಟ್ಟಿದ್ದೀರೋ ಈ ಸಂಕಲ್ಪವಿದೆಯೋ ಅಥವಾ ತಂದೆಯೇ ಮಾಡಬೇಕೋ? ನೀವು ತಂದೆಯ ಸಾಥಿಯಾಗಿದ್ದೀರಾ? ಸ್ವಲ್ಪ ಕೈ ಹೀಗೆ ಎತ್ತಿ ಬಿಡುತ್ತೀರಿ. ಚಾತುರ್ಯ ತೋರಿಸುತ್ತೀರಿ, ಹೀಗೆ ಮಾಡಬೇಡಿರಿ. ಇಡೀ ವಿಶ್ವದಲ್ಲಿ ಮಕ್ಕಳು ಪ್ರತಿಯೊಬ್ಬರೂ ಸೆಳೆತದಿಂದ ಮುಕ್ತರಾಗಬೇಕೆಂದು ಬಾಪ್‌ದಾದಾರವರು ಬಯಸುತ್ತಾರೆ. ಸಾಧನೆಗಳೊಂದಿಗಾಗಲೀ, ವ್ಯಕ್ತಿಯೊಂದಿಗಾಗಲೀ ಇರುವ ಸೆಳೆತವನ್ನು ತ್ಯಜಿಸಬೇಕು. ಉಪಯೋಗಿಸುವುದು ಬೇರೆಯ ವಿಚಾರವಾಯಿತು. ಸೆಳೆತವೇ ಬೇರೆಯ ವಿಚಾರವಾಗಿದೆ ಆದ್ದರಿಂದ ಬಾಪ್‌ದಾದಾರು ಸೆಳೆತದಿಂದ ಮುಕ್ತವಾದ ವರ್ಷವನ್ನಾಗಿ ಆಚರಿಸಬೇಕು ಎಂದುಕೊಳ್ಳುತ್ತಿದ್ದಾರೆ. ಈ ಸಮಾರಂಭದಲ್ಲಿ ನೀವು ಸಹಯೋಗಿಯಾಗುವಿರಾ?  ಮತ್ತೆ ಯಾವುದೋ ಒಂದು ಕಾರಣವನ್ನು ಹೇಳಬಾರದು. ಯಾವ ಕಾರಣವಾದರೂ, ಹಿಮಾಲಯ ಪರ್ವತವೇ ಉರುಳಿ ಬೀಳಲಿ, ಪರ್ವತದಿಂದಲೂ ಪಾರಾಗಿ ಬರುವಷ್ಟು ಸಾಹಸವಿದೆಯೇ? ಮೊದಲು ಟೀಚರ್ಸ್ ಹೇಳಿರಿ. ಬಾಪ್‌ದಾದಾ ನಮ್ಮ ಟೀಚರ್ಸ್ ಗೇ ಹೇಳುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ಖುಷಿಪಡುತ್ತಿದ್ದಾರೆ. ಟೀಚರ್ಸ್ ಅಂತೂ ಸಹಯೋಗ ಕೊಡಲು ಸದಾ ಜೊತೆಯಾಗಿಯೇ ಇರುತ್ತಾರೆ. ಏಕೆಂದರೆ ಇನ್ನು ಮುಂದೆ ಮುಂದೆ ಇಂದಿನ ಪ್ರಪಂಚದಲ್ಲಿ ಯಾರಾದರೆ ಧರ್ಮತ್ಮರು, ಮಹಾತ್ಮರು ಎಂದು ಕರೆಯಲ್ಪಡುತ್ತಿದ್ದಾರೆಯೋ ಅವರ ಪವಿತ್ರತೆಯ ಬುನಾದಿ ಕೂಡ ಅಲುಗಾಡುತ್ತದೆ. ಆದಿಯಲ್ಲಿ ಬ್ರಹ್ಮಬಾಬಾ ಸ್ಥಾಪನೆಗೆ ನಿಮಿತ್ತವಾದಾಗ ಯಾವ ವಿಷಯಕ್ಕಾಗಿ ನಿಂದನೆಗಳು ಬಂದವು?  ಪವಿತ್ರತೆಯ ಕಾರಣದಿಂದಲೇ ತಾನೇ? ಇಲ್ಲದಿದ್ದರೆ ಬ್ರಹ್ಮಾತಂದೆಯ ಜೀವನದಲ್ಲಿ ಎಷ್ಟು ದೊಡ್ಡವರಾದರೂ ಬ್ರಹ್ಮಾ ತಂದೆಯನ್ನು ಬೆರಳೆತ್ತಿ ತೋರಿಸುವ ಧೈರ್ಯ ಯಾರಿಗೂ ಇರಲಿಲ್ಲ? ಅವರದು ಅಂತಹ ವ್ಯಕ್ತಿತ್ವವಾಗಿತ್ತು. ಆದರೆ ಪವಿತ್ರತೆಯ ಕಾರಣದಿಂದ ನಿಂದೆಗಳನ್ನು ಹೊತ್ತರು. ಈ ಪರಮಾತ್ಮ ಜ್ಞಾನದ ನವೀನತೆಯೇ ಪವಿತ್ರತೆ. ಪ್ರತಿಜ್ಞೆ ಮಾಡಿದ್ದೀರಿ ತಾನೆ! ದಂಪತಿಗಳು ಕೈಯನ್ನು ಎತ್ತಿರಿ. ದಂಪತಿಗಳೆಲ್ಲರೂ ಈ ಪ್ರತಿಜ್ಞೆ ಮಾಡಿದ್ದೀರಲ್ಲವೇ ಅಥವಾ ಸ್ವಲ್ಪ ಸ್ವಲ್ಪ ಅಗ್ನಿ ಹತ್ತಿದರೆ ಆರಿಸಿಕೊಳ್ಳುತ್ತಿದ್ದೀರಾ? ವಿಶ್ವಕ್ಕೆ ಪ್ರತಿಜ್ಞೆ ಮಾಡಿದ್ದೀರಲ್ಲವೇ. ನೀವು ಉಪನ್ಯಾಸದಲ್ಲಿ ಕೂಡ ಹೇಳುತ್ತೀರಿ ಪವಿತ್ರತೆ ಇಲ್ಲದೆ ಜ್ಞಾನಿ, ಯೋಗಿ ಆಗಲಾಗುವುದಿಲ್ಲ ಎಂದು. ಸೆಳೆತದಿಂದ ಮುಕ್ತರಾಗಬೇಕು ಸ್ವಲ್ಪ ಸ್ವಲ್ಪ ಕ್ರೋಧವನ್ನು ಬಾಪ್‌ದಾದಾ ಇನ್ನೂ ಕೆಲವರಲ್ಲಿ ನೋಡಿದ್ದಾರೆ ಆದರೆ ಈ ಬಾರಿಗೆ ಬಿಟ್ಟುಬಿಡುತ್ತಿದ್ದೇನೆ. ಆದರೂ ಕೂಡ ದೇಶ ವಿದೇಶಗಳಲ್ಲಿರುವ ಮಕ್ಕಳು ಗಮನವಿಟ್ಟು ಸಂಪೂರ್ಣ ರೂಪದಲ್ಲಿ ಕ್ರೋಧ ಮುಕ್ತ ಜೀವನವನ್ನು ಪ್ರತ್ಯಕ್ಷವಾಗಿ ಅನುಭವ ಮಾಡಿಕೊಂಡು ತೋರಿಸಿರುವವರಿಗೆ ಬಾಪ್‌ದಾದಾ ಪದಮಾಪದಂ ಗಿಂತಲೂ ಹೆಚ್ಚಿನ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಏಕೆಂದರೆ ಈ ಸಮಯದಲ್ಲಿ ವಿದೇಶದವರಾಗಲಿ ಅಥವಾ ಈ ದೇಶದವರಾಗಲಿ, ಸರ್ವರ ಬುದ್ಧಿರೂಪಿ ಟೆಲಿಫೋನಿನ ಸಂಪರ್ಕವು ಮಧುಬನದಲ್ಲಿದೆ. ಈಗ ಎಲ್ಲರ ಸಂಪರ್ಕವೂ (ಕನೆಕ್ಷನ್) ಮಧುಬನದಲ್ಲಿ ಇದೆ. ಆದ್ದರಿಂದ ಎಲ್ಲರೂ ಯಾವ ಅನುಭವವನ್ನು ಮಾಡಿರಲೇಬೇಕೆಂದರೆ, ಯಾರು ಚೆನ್ನಾಗಿ ದೃಢಸಂಕಲ್ಪ ಮಾಡಿದಿರೋ ಅವರಿಗೆ ಬಾಪ್‌ದಾದಾರವರ ಕಡೆಯಿಂದ ವಿಶೇಷ ಎಕ್ಸ್ ಟ್ರಾ (ಹೆಚ್ಚಿನ) ಸಹಾಯವೂ ಸಿಕ್ಕಿದೆ ಎಂಬುದನ್ನು ಆದ್ದರಿಂದ ಒಂದು ವರ್ಷದಲ್ಲಂತೂ ಕ್ರೋಧವನ್ನು ಸಮಾಪ್ತಿ ಮಾಡಿದೆನು. ಈಗ ಅದರಿಂದ ಮುಕ್ತನಾಗಿದ್ದೇನೆಂದು ತಿಳಿದುಕೊಳ್ಳಬೇಡಿರಿ. ಒಂದು ವೇಳೆ ಸಂಪೂರ್ಣ ಸೆಳೆತದಿಂದ  ಮುಕ್ತರಾಗಿರುವ ಅನುಭವ ಮಾಡಿದರೆ ಸ್ವತಃವಾಗಿಯೇ ಕ್ರೋಧಮುಕ್ತರಾಗಿ

ಬಿಡುವಿರಿ. ಕ್ರೋಧವೂ ಸಹ ಏಕೆ ಬರುತ್ತದೆ? ಯಾವ ವಸ್ತುವನ್ನು, ಯಾವ ವಿಚಾರವನ್ನು ನೀವು ಬಯಸುತ್ತೀರೋ ಅದು ಪೂರ್ಣವಾಗದಿದ್ದರೆ ಅಥವಾ ಪ್ರಾಪ್ತಿಯಾಗದಿದ್ದರೆ ಕ್ರೋಧವು ಬರುತ್ತದೆಯಲ್ಲವೇ. ಕ್ರೋಧದ ಕಾರಣವು ಏನಾಗಿದೆ? ನಿಮ್ಮ ಸಂಕಲ್ಪವೇನಿದೆಯೋ ಅದು ಒಳ್ಳೆಯದಾಗಿರಲಿ ಅಥವಾ ಕೆಟ್ಟದ್ದಾಗಿರಲಿ ಆದರೆ ಆ ಸಂಕಲ್ಪವು ಪೂರ್ಣವಾಗದಿದ್ದರೆ ಕ್ರೋಧವು ಬರುವುದು. ಉದಾಹರಣೆಗಾಗಿ ಸಮ್ಮೇಳನವು ನಡೆದರೆ, ಸಮಾರಂಭವು ನಡೆದರೆ ಅದರಲ್ಲಿ ನನ್ನದೂ ಪಾತ್ರವು ಇರಬೇಕೆಂದು ನೀವು ಬಯಸುತ್ತೀರಿ. ಕೊನೆಗೆ ನಮ್ಮಂತಹವರಿಗೆ ಯಾವಾಗ ಅವಕಾಶವು ದೊರೆಯುವುದು ಎಂದು ಭಾವಿಸುತ್ತೀರಿ. ನಿಮಗೆ ಇಚ್ಛೆಯಿರುತ್ತದೆ ಹಾಗೂ ನೀವು ಅದನ್ನು ತಿಳಿಸಿಯೂ ತಿಳಿಸುತ್ತೀರಿ. ಆದರೆ ನಿಮಗೆ ಒಂದು ವೇಳೆ ಅವಕಾಶವು ದೊರೆಯದಿದ್ದರೆ ಆ ಸಮಯದಲ್ಲಿ ಸಿಡಿಮಿಡಿಗುಟ್ಟುತ್ತೀರೋ ಅಥವಾ ಇಲ್ಲವೋ. ಒಂದು ವೇಳೆ ಮಹಾಕ್ರೋಧವನ್ನು ಮಾಡದಿದ್ದರೂ ಯಾರು ಅವಕಾಶ ಕೊಡಲು ನಿರಾಕರಿಸಿದರೋ ಅವರ ಬಗ್ಗೆ ವ್ಯರ್ಥ ಸಂಕಲ್ಪವಾದರೂ ನಡೆಯುವುದಲ್ಲವೇ ಆದ್ದರಿಂದ ಅದು ಪವಿತ್ರತೆಯಾಗಲಿಲ್ಲ. ನಾನು ಈ ಕಾರ್ಯ ಮಾಡುತ್ತೇನೆಂದು ಮುಂದೆ ಬರುವುದು, ವಿಚಾರವನ್ನು ಮುಂದಿಡುವುದಕ್ಕೇನೋ ಅನುಮತಿಯಿದೆ ಆದರೆ ವಿಚಾರದ ನಂತರ ಆ ವಿಚಾರವನ್ನು ಇಚ್ಛೆಯ ರೂಪದಲ್ಲಿ ಬದಲಾಯಿಸಬೇಡಿರಿ. ಯಾವಾಗ ಸಂಕಲ್ಪವು ಇಚ್ಛೆಯ ರೂಪದಲ್ಲಿ ಬದಲಾವಣೆಯಾಗುತ್ತದೆಯೋ ಆಗ ಸಿಡಿಮಿಡಿಗುಟ್ಟುವುದೂ ಸಹ ಕಾಣಿಸಿಕೊಳ್ಳುತ್ತದೆ. ಬಾಯಿಯಿಂದಲೂ ಕ್ರೋಧವು ಪ್ರಕಟವಾಗುತ್ತದೆ ಅಥವಾ ಕೈ, ಕಾಲೂ ಸಹ ಕೆಲಸ ಮಾಡುತ್ತದೆ ಕ್ರೋಧ ಮಾಡುವಾಗ ಕೈ ಕಾಲನ್ನು ಉಪಯೋಗಿಸುವುದು ಮಹಾಕ್ರೋಧವಾಗಿದೆ. ಆದರೆ ನಿಸ್ವಾರ್ಥವಾಗಿ ನಿಮ್ಮ ವಿಚಾರವನ್ನು ತಿಳಿಸಿರಿ. ಸ್ವಾರ್ಥವನ್ನು ಇಟ್ಟುಕೊಂಡು ತಿಳಿಸಬೇಡಿರಿ, ನಾನು ಹೇಳಿದ್ದು ಆಗಲೇಬೇಕೆಂದು ವಿಚಾರ ಮಾಡಬೇಡಿರಿ. ಯಾವುದಾದರೂ ಕಾರ್ಯವನ್ನು ಮಾಡುತ್ತೇನೆಂದು ನೀವೇ ವಿಚಾರವನ್ನು ಮುಂದೆ ಇಡುವುದಕ್ಕೆ ಅಡ್ಡಿಯಿಲ್ಲ, ಅದೇನೂ ತಪ್ಪಲ್ಲ. ಆದರೆ ಏಕೆ ಅವಕಾಶ ಕೊಡಲಿಲ್ಲ ನನ್ನಲ್ಲಿ ಏನು ಕಡಿಮೆಯಿದೆ ಎನ್ನುವುದರಲ್ಲಿ ಹೋಗಬೇಡಿರಿ, ಇಲ್ಲದಿದ್ದರೆ ಈರ್ಷ್ಯೆ, ತಿರಸ್ಕಾರ ಮುಂತಾದ ಸಾಥಿಗಳು ಒಂದೊಂದೇ ಅವಶ್ಯವಾಗಿ ಬರುತ್ತವೆ. ಆದ್ದರಿಂದ ಪವಿತ್ರತೆಯ ನಿಯಮವನ್ನು ಪಕ್ಕಾ ಮಾಡಿಕೊಂಡರೆ, ಆಸಕ್ತಿ ಆಕರ್ಷಣೆಯಿಂದ ಮುಕ್ತವಾಗಿ ಬಿಟ್ಟರೆ, ಇದು ಆಗಲೇಬೇಕು ಎನ್ನುವ ಆಸಕ್ತಿಯನ್ನೂ ಇಟ್ಟುಕೊಳ್ಳುವುದಿಲ್ಲ. ನೀವು ನಿಸ್ವಾರ್ಥವಾಗಿ ಕಾರ್ಯ ಮಾಡಲು ಮುಂದೆ ಬಂದರೆ, ಅದು ಅವಶ್ಯವಾಗಿ ಬೇಗನೆ ಪರಿಣಾಮಕಾರಿಯಾಗುವುದು ಸ್ವಾರ್ಥ ಅಥವಾ ಅಸೂಯೆಯ ವಶವಾಗಿ ಕಾರ್ಯ ಮಾಡಲು ಒಪ್ಪಿಕೊಂಡರೆ ಅದು ಇನ್ನೂ ಕ್ರೋಧವನ್ನು ಉತ್ಪನ್ನ ಮಾಡುವುದು ಹಾಗಾದರೆ ಶಿಕ್ಷಕಿಯರು ಏನು ಮಾಡುವಿರಿ? ಶೇಕಡಾ ನೂರರಷ್ಟು ಸೆಳೆತಮುಕ್ತರಾಗಿರಿ, ಆಗಲಿ ಅಥವಾ ಇಲ್ಲ ಎಂಬುದನ್ನು ಹೇಳಿರಿ, ವಿದೇಶಿಯರು ಆಗಲಿ ಬಾಬಾ ಎಂದು ಹೇಳಿರಿ.

ಬಾಪ್‌ದಾದಾರವರಂತೂ ಟಿವಿಯಲ್ಲಿ ಬಹಳ ಹೊಸ ಹೊಸ ವಿಷಯಗಳನ್ನು ನೋಡುತ್ತಿದ್ದಾರೆ. ಈಗ 60 ವರ್ಷಗಳು ಪೂರ್ತಿ ಆಗುತ್ತಿವೆ. ಈಗಲೂ ನಡೆಯದ ವಿಷಯಗಳ ಹೊಸ ಹೊಸ ಆಟಗಳು ಬಹಳ ಕಾಣಿಸುತ್ತಿವೆ. ಈ ಸೀಸನ್ ನಲ್ಲಿ ಒಂದೊಂದು ವರ್ಣನೆ ಮಾಡುತ್ತೇನೆ ಆದರೆ ನೆನಪಿಟ್ಟುಕೊಳ್ಳಿರಿ. ಒಂದು ವೇಳೆ ಯಾರ ಪ್ರತಿಯಾದರೂ ಕನಸಿನಲ್ಲಾದರು ಸೆಳೆತ, ಸ್ವಾರ್ಥವಿದ್ದರೆ ಅದನ್ನು ಸಮಾಪ್ತಿ ಮಾಡಿರಿ. ಕೆಲವರು ಹೇಳುತ್ತಿದ್ದಾರೆ ನಾವು ಕರ್ಮದಲ್ಲಿ

ಬರುತ್ತಿಲ್ಲ ಆದರೂ ಕನಸುಗಳು ಬರುತ್ತಿವೆ ಎಂದು ಒಂದುವೇಳೆ ವ್ಯರ್ಥ ಅಥವಾ ವಿಕಾರದ ಸ್ವಪ್ನಗಳು ಸೆಳೆತ ಹಾಗೂ ಸ್ವಪ್ನಗಳು ಬರುತ್ತಿವೆ ಎಂದರೆ ತಪ್ಪದೇ ನಿದ್ದೆ ಮಾಡುವ ಸಮಯದಲ್ಲಿ ನೀವು ಸೋಮಾರಿತನದಿಂದ ನಿದ್ದೆ ಮಾಡಿದ ಹಾಗೆ. ಕೆಲವರು ದಿನವಿಡೀ ನನಗೆ ಈ ಸಂಕಲ್ಪಗಳೇ ಬರುತ್ತಿಲ್ಲ ಏನೂ ನಡೆಯುತ್ತಿಲ್ಲ ಕೂಡ ಆದರೂ ನನ್ನ ಕನಸಿನಲ್ಲಿ ಬಂದುಬಿಟ್ಟಿತು ಎಂದು ಹೇಳುತ್ತಿದ್ದಾರೆ. ಆಗ ಪರಿಶೀಲಿಸಿಕೊಳ್ಳಿರಿ ನಿದ್ದೆ ಮಾಡುವ ಮೊದಲು ಇಡೀ ದಿನದ ಲೆಕ್ಕಾಚಾರವನ್ನು ಬಾಬಾರವರಿಗೆ ಕೊಟ್ಟು ಬುದ್ಧಿಯನ್ನು ಖಾಲಿ ಮಾಡಿ ಮಲಗಿ ಕೊಂಡಿದ್ದೀರಾ ಎಂದು. ಅಷ್ಟೇ ಆಗಲಿ ಬೇಸತ್ತು ಬಂದು ಮಂಚದ ಮೇಲೆ ಹೋಗಿ ನಿದ್ದೆ ಮಾಡಿದರೆ ಅದು ಸೋಮಾರಿತನ. ನೀವು ವಿಕರ್ಮ ಮಾಡದೇ ಇರಬಹುದು ಸಂಕಲ್ಪ ಕೂಡ ಮಾಡಲಿಲ್ಲ ಆದರೆ ಅದು ಸೋಮಾರಿತನದ ಶಿಕ್ಷೆ ಏಕೆಂದರೆ ಬಾಪ್‌ದಾದಾರವರ ಆಜ್ಞೆಯೇನೆಂದರೆ, ನಿದ್ದೆ ಹೋಗುವ ಸಮಯದಲ್ಲಿ ಸದಾ ನಿಮ್ಮ ಬುದ್ಧಿಯನ್ನು ಸ್ವಷ್ಟವಾಗಿಸಿಕೊಳ್ಳಿರಿ. ಒಳ್ಳೆಯದಾದರೂ, ಕೆಟ್ಟದಾದರೂ ಎಲ್ಲಾ ತಂದೆಗೆ ಅರ್ಪಿಸಿರಿ ಮತ್ತು ನಿಮ್ಮ ಬುದ್ಧಿಯನ್ನು ಖಾಲಿ ಮಾಡಿಕೊಳ್ಳಿ. ತಂದೆಗೆ ಕೊಟ್ಟುಬಿಟ್ಟಿದ್ದೀರಿ ಆಗ ತಂದೆಯೊಂದಿಗೆ ನಿದ್ದೆಯನ್ನು ಮಾಡಿ. ಒಬ್ಬೊಂಟಿಯಾಗಿ ಅಲ್ಲ. ಒಂಟಿಯಾಗಿ ಮಲಗಿದರೆ ಕನಸು ಬರುತ್ತವೆ. ತಂದೆಯ ಜೊತೆ ಮಲಗಿದರೆ ಯಾವಾಗಲೂ ಅಂತಹ ಕನಸುಗಳು ಬರುವುದಿಲ್ಲ ಆದರೆ ಆಜ್ಞೆಯನ್ನು ಪಾಲಿಸುತ್ತಿಲ್ಲ ಆದ್ದರಿಂದ ಆಜ್ಞೆಗೆ ಬದಲು ಆಸೆ ಉಳಿಯುತ್ತಿದೆ. ಮತ್ತೆ ಬೆಳಗ್ಗೆ ಎದ್ದ ನಂತರ ನನ್ನ ಪವಿತ್ರತೆ, ಕನಸಿನಲ್ಲಿ ಸಮಾಪ್ತಿಯಾಗಿ ಬಿಟ್ಟಿತು ಎನ್ನುತ್ತಿದ್ದೀರಿ. ಇದಕ್ಕೆ ಕಾರಣ ಸೋಮಾರಿತನ ಸೋಮಾರಿಯಾಗಬೇಡಿರಿ ಹೇಗೆ ಬಂದಿದ್ದೀರೋ ಹಾಗೆ ಇಲ್ಲಿನ ವಿಷಯಗಳು, ಅಲ್ಲಿನ ವಿಷಯಗಳು ಹೇಳುತ್ತಾ, ಹೇಳುತ್ತಾ ಮಲಗುತ್ತಿದ್ದೀರಿ ಏಕೆಂದರೆ ಸಮಾಚಾರಗಳು ಬಹಳ ಇರುತ್ತದೆ ಮತ್ತು ವ್ಯರ್ಥವೇ ಮನಸ್ಸಿಗೆ ಕೂಡ ಇಷ್ಟ. ಕೆಲವರು ಸಮಯ ಸಿಗುತ್ತಿಲ್ಲ ಆದ್ದರಿಂದ ಮಲಗುವ ಕೋಣೆಯಲ್ಲಿ ಚರ್ಚಿಸುತ್ತಿದ್ದೇವೆ ಎನ್ನುತ್ತಿದ್ದಾರೆ. ಆದರೆ ಯಾವಾಗಲೂ ವ್ಯರ್ಥ ವಿಷಯಗಳನ್ನು ವರ್ಣನೆ ಮಾಡುತ್ತಾ ಮಾಡುತ್ತಾ ಮಲಗಬಾರದು. ಇದು ಸೋಮಾರಿತನ. ಇದು ಆಜ್ಞೆಯನ್ನು ಉಲ್ಲಂಘಿಸುವುದು. ಸಮಯ ಲಭಿಸುತ್ತಿಲ್ಲ ಎನ್ನುತ್ತಿದ್ದೀರಿ ಆದರೆ ಅದು ಮುಖ್ಯವಾದ ವಿಷಯವೇ ಆದರೆ ನಿದ್ರಾ ಕೋಣೆಯಲ್ಲಿ ಅಲ್ಲದೆ ಆ ಕೋಣೆಯ ಹೊರಗೆ ಹೋಗಿ ಒಂದು, ಎರಡು ಕ್ಷಣದಲ್ಲಿ ಒಬ್ಬರಿಗೊಬ್ಬರು ಹೇಳಿಕೊಳ್ಳಿರಿ. ಆದರೆ ಮಲಗುತ್ತಾ, ಮಲಗುತ್ತಾ ಮಾತ್ರ ಹೇಳಿಕೊಳ್ಳಬೇಡಿರಿ. ಕೆಲ ಮಕ್ಕಳಿಗೆ ಈ ಅಭ್ಯಾಸವಿದೆ. ಆದ್ದರಿಂದ ಹೇಗೆ ನಿದ್ದೆ ಮಾಡುತ್ತಿದ್ದಾರೆ ಎಂಬುದು ಕೂಡ ಬಾಪ್‌ದಾದಾ ನೋಡುತ್ತಾರೆ. ಒಂದು ಕ್ಷಣದಲ್ಲಿ ಬಾಪ್‌ದಾದಾ ಇಡೀ ವಿಶ್ವವೆಲ್ಲಾ ಸುತ್ತು ಹಾಕುತ್ತಾರೆ. ಹೇಗೆ ನಿದ್ರೆ ಮಾಡುತ್ತಿದ್ದಾರೆ, ಹೇಗೆ ಮಾತನಾಡಿಕೊಳ್ಳುತ್ತಿದ್ದಾರೆ ಎಂಬುವುದು ಟಿ. ವಿ ಯಲ್ಲಿ ನೋಡುತ್ತಾರೆ. ಬಾಪ್‌ದಾದಾ ಎಲ್ಲವನ್ನು ನೋಡುತ್ತಾರೆ. ಬಾಪ್‌ದಾದಾರವರಿಗಂತೂ ನೋಡಲು ಒಂದು ಕ್ಷಣವೇ ಹಿಡಿಸುತ್ತದೆ. ಹೆಚ್ಚು ಸಮಯ ಕೂಡ ಇಡಿಸುವುದಿಲ್ಲ. ಪ್ರತಿಯೊಬ್ಬ ಸೆಂಟರ್, ಕುಟುಂಬದಲ್ಲಿರುವವರನ್ನು ಎಲ್ಲರನ್ನು ನೋಡುತ್ತಾರೆ. ಕೇವಲ ಸೆಂಟರ್ ನೋಡುತ್ತಾರೆ ಎಂದು ತಿಳಿಯಬೇಡಿರಿ ನಿಮ್ಮ ಮನೆಯ ಬಗ್ಗೆ ಕೂಡ ಟಿವಿಯಲ್ಲಿ ಬರುತ್ತದೆ. ಯಾವಾಗ ಆದಿ ಅರ್ಥಾತ್ ಅಮೃತ ವೇಳೆಯಿಂದ ಅಂತಿಮ ಎಂದರೆ ರಾತ್ರಿಯವರೆಗೆ ಚೆನ್ನಾಗಿರುತ್ತದೆಯೋ ಆಗ ಮಧ್ಯದ ಸ್ಥಿತಿ ಸ್ವತಹವಾಗಿ ಚೆನ್ನಾಗಿರುತ್ತದೆ. ತಿಳಿಯಿತೇ ಇತರ ಮಾತುಗಳು ಮಾತನಾಡುತ್ತಾ ಕೆಲವರು 12, 12:30ರವರೆವರೆಗೆ ಕೂಡ ಎಚ್ಚರವಿರುತ್ತಿದ್ದಾರೆ. ಅವುಗಳಲ್ಲಿ ನಿಮಗ್ನವಾಗಿ ಬಿಡುತ್ತಿದ್ದಾರೆ. ಅವರಿಗೆ ಸಮಯ ಕೂಡ ತಿಳಿಯುತ್ತಿಲ್ಲ ಮತ್ತೆ ಅಮೃತ ವೇಳೆ ಎದ್ದು ಕುಳಿತುಕೊಳ್ಳುತ್ತಾರೆ. ಸ್ವಲ್ಪ ಸಮಯ ನಿದ್ರಾಲೋಕದಲ್ಲಿ ಸ್ವಲ್ಪ ಸಮಯ ಯೋಗದಲ್ಲಿ ಇರುತ್ತಿದ್ದಾರೆ. ಏಕೆಂದರೆ

ಯಾರಾದರೆ ಸೋಮಾರಿಯಾಗಿ ನಿದ್ದೆ ಮಾಡುತ್ತಾರೆಯೋ ಅವರು ಅಮೃತ ವೇಳೆ ಕೂಡ ಸೋಮಾರಿಯಾಗಿಯೇ ಇರುತ್ತಾರೆ. ನಿಮ್ಮನ್ನು ಯಾರು ನೋಡಲಿಲ್ಲ ಎಂದು ಕೊಳ್ಳಬೇಡಿ, ಬಾಪ್‌ದಾದಾ ನೋಡುತ್ತಿದ್ದಾರೆ. ನಿದ್ರೆಯೂ ಬಹಳ ಶಾಂತಿಯನ್ನು, ಸುಖವನ್ನು ಕೊಡುತ್ತದೆ. ಆದ್ದರಿಂದ ಅದನ್ನು ಕೂಡ ಮಿಶ್ರಣ ಮಾಡಿಬಿಡುತ್ತಿದ್ದೀರಿ. ಒಂದು ವೇಳೆ ಕೇಳಿದರೆ ನಾನು ಮಲಗುತ್ತಿಲ್ಲ ನಾನು ಬಹಳ ಶಾಂತಿಯನ್ನು ಅನುಭವ ಮಾಡಿಕೊಳ್ಳುತ್ತಿದ್ದೇನೆ ಎನ್ನುತ್ತಾರೆ. ನಿದ್ದೆಯನ್ನು ಕೂಡ ವಿಶ್ರಾಂತಿ ಎಂದು ಕರೆಯುತ್ತಾರೆ. ಯಾವುದಾದರೂ ಅನಾರೋಗ್ಯ ಬಂದಾಗ ವಿಶ್ರಾಂತಿ ಪಡೆಯಬೇಕು ಎಂದು ವೈದ್ಯರು ಹೇಳುತ್ತಾರಲ್ಲವೇ? ವಿಶ್ರಾಂತಿ ಅರ್ಥಾತ್ ಏನು ಮಾಡಬೇಕು? ವಿಶ್ರಾಂತಿ ಎಂದರೆ ಸಮಯಕ್ಕೆ ಮಲಗುವುದು. ನಿದ್ರೆ ಕೂಡ ವಿಶ್ರಾಂತಿಯನ್ನು ಕೊಡುತ್ತದೆ. ಅದು ಕೂಡ ನಿಮಗೆ ತಾಜಾತನವನ್ನು ಕೊಡುತ್ತದೆ. ನಿದ್ರೆಯಿಂದ ತಾಜಾ ಆಗಿಬಿಟ್ಟು ಎದ್ದ ನಂತರ ಇಂದು ಯೋಗದಲ್ಲಿ ಬಹಳ ತಾಜಾತನ ಇದೆ ಎನ್ನುತ್ತಿದ್ದಾರೆ.

ಎಲ್ಲರೂ ದೂರ ದೇಶಗಳಿಂದ ಬಂದಿದ್ದೀರಲ್ಲವೇ. ಈ ಗ್ರೂಪಲ್ಲಿ ಮೊದಲ ಸಾರಿ ಬಂದಿರುವವರು ಕೈಯೆತ್ತಿರಿ. ಚಿಕ್ಕ ಮಕ್ಕಳು ದೊಡ್ಡವರಿಗಿಂತ ಬಹಳ ಪ್ರಿಯವಾಗಿರುತ್ತಾರೆ. ಆದರೆ ಹೊಸದಾಗಿ ಬಂದಿರುವವರು ಈಗ ಅಲಂಕರಿಸಿಕೊಳ್ಳಬೇಕು. ದೊಡ್ಡವರು 10 ವರ್ಷಗಳಲ್ಲಿ ಮಾಡಿರುವುದು ನೀವು 10 ದಿನಗಳಲ್ಲಿ ಮಾಡಬೇಕು. ಮಾಡಬಲ್ಲಿರಿ ಏಕೆಂದರೆ ಬಾಪ್‌ದಾದಾ ಹಿಗೆ ತಿಳಿಯುತ್ತಿದ್ದಾರೆ - ಹೊಸಬರಾಗಿ ಇದ್ದಾಗ ಉತ್ಸಾಹ ಉಲ್ಲಾಸಗಳು ಬಹಳ ಇರುತ್ತದೆ. ಹಳೆಬರಾಗುತ್ತಾ ಹೋದಂತೆ. ಹಳೆಬರು ಅರ್ಥ ಮಾಡಿಕೊಂಡಿದ್ದಾರೆ. ಆದ್ದರಿಂದ ಹೇಳುವ ಅವಶ್ಯಕತೆ ಇಲ್ಲ. ಹೊಸಬರೆಲ್ಲರೂ ಕುಮಾರಿಯರಾದರೂ, ಕುಮಾರರಾದರೂ, ಕುಟುಂಬದಲ್ಲಿರುವವರಾದರೂ ಕುಟುಂಬದಲ್ಲಿ ಇರುವವರು ಮಹಾತ್ಮರೆಲ್ಲರನ್ನು ಚರಣಗಳ ಹತ್ತಿರ ಭಾಗಿಸಿಕೊಳ್ಳಬೇಕು ನೀವು ಕುಟುಂಬದಲ್ಲಿ ಕೂಡ ನಿರ್ವಿಘ್ನವಾಗಿ ಪವಿತ್ರತೆಯ ಶಕ್ತಿಯಿಂದ ಮುಂದಕ್ಕೆ ಹೋಗುತ್ತಿದ್ದೀರಿ ಎಂದು ಎಲ್ಲರೂ ಗುಣಗಾನ ಮಾಡುತ್ತಾರೆ. ನಿಮ್ಮೆಲ್ಲರ ಮುಂದೆ ಮಹಾತ್ಮರು ಕೂಡ ತಲೆಬಾಗಿಸುವ ದಿನ ಬರುತ್ತದೆ ಆದರೆ ನಿಮ್ಮ ಪ್ರತಿಜ್ಞೆಯನ್ನು ನೆನಪಿಟ್ಟುಕೊಳ್ಳಬೇಕು. ಸೆಳೆತದಿಂದ ಮುಕ್ತರಾಗಬೇಕು.

**ನಾಲ್ಕೂ ಕಡೆಯ ಹೃದಯದಲ್ಲಿ ತುಂಬಿಕೊಂಡಿರುವ ಬಾಪ್‌ದಾದಾರವರ ಮುದ್ದಾದ ಶ್ರೇಷ್ಠ ಆತ್ಮರಿಗೆ, ಸದಾ ತಂದೆಯ ಪ್ರತಿಯೊಂದು ಆದೇಶವನ್ನೂ ಪಾಲನೆ ಮಾಡುವುದರಿಂದ ಸ್ವಯಂನ ಹಾಗೂ ಅನ್ಯರ ಆಸೆಯನ್ನು ಸಮರ್ಪಿತ ಮಾಡಿಸುವವರು, ಸದಾ ಪವಿತ್ರತೆಯ ಸ್ತಂಭವನ್ನು ಸುಭದ್ರ ಮಾಡುವವರು ಹಾಗೂ ಪವಿತ್ರತೆಯ ಲೈಟ್ ಅನ್ನು (ಪ್ರಕಾಶವನ್ನು) ಲೈಟ್ ಹೌಸ್ (ಪ್ರಕಾಶಗೃಹ) ಆಗಿ ಪ್ರಸಾರ ಮಾಡುವ ವಿಶೇಷ ಆತ್ಮರಿಗೆ, ಸದಾ ಸ್ವಯಂ ತಮ್ಮನ್ನು ಸೆಳೆತ ಮುಕ್ತರನ್ನಾಗಿ ಮಾಡಿಕೊಳ್ಳುವ, ತಂದೆಯ ಸಮೀಪದಲ್ಲಿ ಬರುವ, ಇರುವ ಎಲ್ಲ ಮಕ್ಕಳಿಗೂ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 16-11-1995.

***ಬಾಪ್‌ದಾದಾರವರ ಬಯಕೆ - ಡೈಮಂಡ್ ಜುಬ್ಲಿ ವರ್ಷವನ್ನು ಸೆಳೆತ ಮುಕ್ತರಾಗುವ ವರ್ಷವನ್ನಾಗಿ ಆಚರಿಸಿರಿ.***

ಯಾವುದಾದರೂ ವ್ಯಕ್ತಿ ಅಥವಾ ವೈಭವದ ಕಡೆ ಪದೇ ಪದೇ ಸಂಕಲ್ಪವಾದರೂ ಬಂದರೆ ಅರ್ಥಾತ್ ಇವರು ಅಥವಾ ಇದು ಇದ್ದರೆ ತುಂಬಾ ಒಳ್ಳೆಯದು ಎನ್ನುತ್ತಾರೆ ಇದು ಸಹ ಆಕರ್ಷಣೆಯಾಗಿದೆ. ವ್ಯಕ್ತಿಯ ಸೇವೆಯ ವಿಶೇಷತೆಯ ದಾತ ಯಾರಾಗಿದ್ದಾರೆ? ಆ ವಿಶೇಷತೆಯನ್ನು ಯಾರಾದರೂ ವ್ಯಕ್ತಿಯು ಕೊಡುತ್ತಾರೆಯೇ? ಅಥವಾ ತಂದೆಯು ಕೊಡುತ್ತಾರೆಯೇ? ಅಥವಾ ಈ ವ್ಯಕ್ತಿಯು ತುಂಬಾ ಉತ್ತಮರಾಗಿದ್ದಾರೆ ಎನ್ನುತ್ತಿದ್ದೀರಿ. ಉತ್ತಮರಾಗಿದ್ದಾರೆ ಎನ್ನುವುದೇನೋ ಸರಿ ಆದರೆ ಯಾವಾಗಲಾದರೂ ಯಾವುದಾದರೂ ವಿಶೇಷತೆಯನ್ನು ನೋಡಿದರೆ, ಸೇವೆಯನ್ನು ನೋಡಿದರೆ ದಾತನನ್ನು ಮರೆಯಬೇಡಿರಿ. ಆ ವ್ಯಕ್ತಿಯು ಸಹ ತಂದೆಯಿಂದ ತೆಗೆದುಕೊಳ್ಳುವವರಾಗಿದ್ದಾರೆ. ದಾತ ಅಲ್ಲ ತಂದೆಯವರಿಲ್ಲದೇ ಆ ವ್ಯಕ್ತಿಯಲ್ಲಿ ಆ ಸೇವೆಯ ಗುಣ ಅಥವಾ ವಿಶೇಷತೆ ಬರುತ್ತದೆಯೇ? ಎಂದು ಕೇಳುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪೂರ್ತಿಯಾಗಿ ನನ್ನ ಹೃದಯದಲ್ಲಿ ತಂದೆಯ ಸ್ನೇಹವನ್ನು ತುಂಬಿಕೊಂಡಿದ್ದೇನೆ.

2. ನಾನು ನನ್ನ ಪವಿತ್ರತೆಯಿಂದ ಪ್ರಕೃತಿಯನ್ನು ಕೂಡ ಪಾವನ ಮಾಡುತ್ತೇನೆ ಎಂಬ ಪವಿತ್ರತೆಯ ವ್ರತವನ್ನು ಪ್ರತ್ಯಕ್ಷ ಮಾಡಿದ್ದೇನೆ.

3. ನಾನು ಸೆಳೆತ, ಕ್ರೋಧದಿಂದ ಮುಕ್ತವಾಗಿ ಕ್ರೋದಮುಕ್ತ ಜೀವನವನ್ನು ಪ್ರತ್ಯಕ್ಷವಾಗಿ ಅನುಭವ ಮಾಡಿಕೊಂಡು ತೋರಿಸಿ ಬಾಪ್‌ದಾದಾರವರಿಂದ ಪದಮಾಪದಂಗಿಂತ ಹೆಚ್ಚಿನ ಶುಭಾಶಯಗಳನ್ನು ಪಡೆದಿದ್ದೇನೆ.

4. ನಾನು ಸಂಪೂರ್ಣವಾಗಿ ಸೆಳೆತದಿಂದ ಮುಕ್ತವಾಗಿ, ಸ್ವತಹವಾಗಿ ಕ್ರೋದ ಮುಕ್ತವಾಗಿದ್ದೇನೆ.

5. ನಾನು ಇಡೀ ದಿನದ ಲೆಕ್ಕಾಚಾರವನ್ನು ತಂದೆಗೆ ಸಮರ್ಪಿಸಿ ತಂದೆಯೊಂದಿಗೆ ಮಲಗಿ ಕನಸಿನಲ್ಲಿ ಕೂಡ ಪವಿತ್ರತೆಯನ್ನು ಧಾರಣೆ ಮಾಡಿದ್ದೇನೆ.

6. ನಾನು ಕುಟುಂಬದಲ್ಲಿ ಇರುತ್ತಲೂ ಕೂಡ ನಿರ್ವಿಘ್ನವಾಗಿ ಪವಿತ್ರತೆಯ ಶಕ್ತಿಯಿಂದ ಮುಂದಕ್ಕೆ ಹೋಗಿದ್ದೇನೆ.